(ದಿನಾಂಕಃ**18/12/2025**ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರೆದ ಮುಖ್ಯ ವಿಚಾರಣೆ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ –**

25. (ಖಜಾನೆಯಿಂದ ತರಿಸಿದ ಪೆಟ್ಟಿಗೆಯಲ್ಲಿಯ ಸೀಲ್ಡ ಕವರನ್ನು ಪಡೆದು, ತೆರೆದ ನ್ಯಾಯಾಲಯದಲ್ಲಿ ತೆರೆದು ಸ್ವತ್ತನ್ನು ಸಾಕ್ಷಿಗೆ ತೋರಿಸಲಾಯಿತು.) ಈಗ ತೋರಿಸಲಾದ ರೂ.500/- ರ 2 ನೋಟುಗಳು ಹಾಗೂ ರೂ.2,000/- ದ 2 ನೋಟುಗಳ ಪೋಟೋಗಳು ಈ ಮೇಲೆ ಹೇಳಿದ ನೋಟುಗಳೇ ಇರುತ್ತವೆ. ರೂ.500/- ರ 2 ನೋಟುಗಳನ್ನು ಮುಮಾ-7 ಹಾಗೂ ರೂ.2,000/- ದ 2 ನೋಟುಗಳ ಪೋಟೋಗಳನ್ನು ಮುಮಾ-8 ಎಂದು ಗುರುತಿಸಲಾಯಿತು. (ಮುಮಾ-7 ಮತ್ತು 8ರ ನೋಟುಗಳ ನಂಬರುಗಳನ್ನು ನಿಪಿ-7ರ 4ನೇ ಪುಟದಲ್ಲಿರುವ ನಂಬರನ ಸಂಖ್ಯೆಗಳೊಂದಿಗೆ ಹೋಲಿಸಿ ನೋಡಲಾಗಿ, ಪರಸ್ಪರ ಹೊಂದಾಣಿಕೆ ಇರುತ್ತದೆ.)

**ಪಾಟೀ ಸವಾಲು ಆರೋಪಿ ಅಥವಾ ಆರೋಪಿ ಪರ ಶ್ರೀ ಪಿ.ವಿ.ಎಸ್. ವಕೀಲರಿಂದ–**

(ಆರೋಪಿ ಪರ ವಕೀಲರು ವಕೀಲರು ಗೈರು ಹಾಜರಿದ್ದು, ಆರೋಪಿ ಸಮಯ ಕೋರಿದ್ದು, ಸಾಕ್ಷಿ ಮುಖ್ಯ ವಿಚಾರಣೆಯ ದಿನಾಂಕ ಮತ್ತು ಸಾಕ್ಷಿಗೆ ಸಮನು ನೀಡಿದ ಆದೇಶ ಪರಿಶೀಲಿಸಿ, ಸಮಯ ನೀಡಲು ಯಾವುದೇ ಸಕಾರಣಗಳು ಕಂಡು ಬಂದಿಲ್ಲವಾದ್ದರಿಂದ ಸಿಆರ್.ಪಿ.ಸಿ. ಕಲಂ.309 ಹಾಗೂ ಗೌರವಾನ್ವಿತ ಉಚ್ಛ ನ್ಯಾಯಾಲಯದ ಸುತ್ತೋಲೆ ಮಿಸ್ ನಂ.ಎಚ್.ಸಿ.ಎಲ್.ಸಿ.32/25 ದಿನಾಂಕ 22/11/2025ರ ಅನ್ವಯ ಮನವಿ ಯನ್ನು ತಳ್ಳಿಹಾಕಿ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ.